# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಆಯುಕ್ತರವರ ಕಛೇರಿ, ನರಸಿಂಹರಾಜ ವೃತ್ತ, ಬೆಂಗಳೂರು-560 002

ಸಂಖ್ಯೆ:ಮು.ಅ(ಪ.ಕೋ)/ಪಿಆರ್/1477/10-11 ದಿನಾಂಕ:01-06-2011

## ಸುತ್ತೋಲೆ

**ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಲಯಗಳ ವ್ಯಾಪ್ತಿಯಲ್ಲಿ 40 ಮೈಕ್ರಾನ್‌ಗಿಂತ ಕಡಿಮೆ ಇರುವ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಲು ಕಟ್ಟುನಿಟ್ಟಿನ ಕ್ರಮಕೈಗೊಳ್ಳುವ ಬಗ್ಗೆ.**

**ಉಲ್ಲೇಖ: ಈ ಕಛೇರಿಯ ಸುತ್ತೋಲೆ ಸಂಖ್ಯೆ: ಮು.ಅ (ಪ.ಕೋ)/ಪಿಆರ್/1442/10-11, ದಿನಾಂಕ:15-03-2011**

*********

ಪ್ಲಾಸ್ಟಿಕ್ ತ್ಯಾಜ್ಯದಿಂದ ಪರಿಣಾಮಕಾರಿಯಾಗಿ ಪರಿಸರದ ಅವನತಿಯನ್ನು ತಡೆಯುವ ಉದ್ದೇಶದಿಂದ, ಭಾರತ ಸರಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯವು (MoEF) ಪ್ಲಾಸ್ಟಿಕ್ ತ್ಯಾಜ್ಯ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮ 2011, ದಿನಾಂಕ: 04-02-2011 ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಸದರಿ ಅಧಿಸೂಚನೆಯ ಪ್ರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಲಯಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಂಗಡಿಗಳು, ಹೋಟೆಲ್‌ಗಳು, ವಾಣಿಜ್ಯ ಸಂಕೀರ್ಣಗಳು ಮತ್ತು ದೊಡ್ಡ ಪ್ರಮಾಣದ ತ್ಯಾಜ್ಯ ಉತ್ಪಾದಕರು 40 ಮೈಕ್ರಾನ್‌ಗಿಂತ ಕಡಿಮೆ ಇರುವ ಪ್ಲಾಸ್ಟಿಕ್ (ಪ್ಲಾಸ್ಟಿಕ್ ಕೈಚೀಲ, ಪ್ಲಾಸ್ಟಿಕ್ ಶೀಟ್, ತಿಂಡಿ ಊಟದ ಬಳಕ್ಕೆಯಲ್ಲಿ ಇತ್ಯಾದಿ) ಬಳಕೆ ಮಾಡುವುದನ್ನು ದಿನಾಂಕ:15-03-2011 ರಿಂದ ನಿಷೇಧಿಸಲಾಗಿದ್ದು, 40 ಮೈಕ್ರಾನ್‌ಗಿಂತ ಕಡಿಮೆ ಇರುವ ಪ್ಲಾಸ್ಟಿಕ್ ಅನ್ನು ಕಂಡುಹಿಡಿಯಲು ಗೇಜ್ ಮೀಟರ್‌ಗಳನ್ನು ಎಲ್ಲಾ ವಲಯಗಳಲ್ಲಿ ಉಪ ವಲಯಕ್ಕೆ ಒಂದರಂತೆ ಖರೀದಿಸುವುದು ಹಾಗೂ ತಮ್ಮ ವಲಯಗಳಲ್ಲಿ ಬರುವ ಅಂಗಡಿಗಳು, ಹೋಟೆಲ್‌ಗಳು, ವಾಣಿಜ್ಯ ಸಂಕೀರ್ಣಗಳು ಮತ್ತು ದೊಡ್ಡ ಪ್ರಮಾಣದ ತ್ಯಾಜ್ಯ ಉತ್ಪಾದಕರು 40 ಮೈಕ್ರಾನ್‌ಗಿಂತ ಕಡಿಮೆ ಇರುವ ಪ್ಲಾಸ್ಟಿಕ್ ಬಳಕೆಯನ್ನು ಬಳಸುತ್ತಿರುವುದು ಕಂಡುಬಂದಲ್ಲಿ, ಅಂತಹ ಪ್ಲಾಸ್ಟಿಕ್ ಜಪ್ತಿಮಾಡುವುದು ಹಾಗೂ ಕಾನೂನು ರೀತ್ಯಾ ಕ್ರಮತೆಗೆದುಕೊಳ್ಳಲು ಉಲ್ಲೇಖ ಪತ್ರದಂತೆ ಸೂಚಿಸಲಾಗಿತ್ತು.

ಆದರೆ ಪಾಲಿಕೆಯ ಎಲ್ಲಾ ವಲಯಗಳ ವ್ಯಾಪ್ತಿಯಲ್ಲಿ 40 ಮೈಕ್ರಾನ್‌ಗಿಂತ ಕಡಿಮೆ ಇರುವ ಪ್ಲಾಸ್ಟಿಕ್ ಕೈಚೀಲಗಳ ಬಳಕೆಯು ಕಂಡುಬಂದಿದ್ದು, ಈ ನಿಟ್ಟಿನಲ್ಲಿ 40 ಮೈಕ್ರಾನ್‌ಗಿಂತ ಕಡಿಮೆ ಇರುವ ಪ್ಲಾಸ್ಟಿಕ್ ಕೈಚೀಲಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲು ವಲಯವಾರು ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸಿ ಪ್ರತಿ ದಿನದ ಪ್ರಗತಿಯ ವರದಿಯನ್ನು ಕೇಂದ್ರ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸಲು ಸೂಚಿಸಲಾಗಿದೆ. ಇನ್ನು ಮುಂದೆ 40 ಮೈಕ್ರಾನ್‌ಗಿಂತ ಕಡಿಮೆ ಇರುವ ಪ್ಲಾಸ್ಟಿಕ್ ಬಳಕೆಯು ಪಾಲಿಕೆಯ ವ್ಯಾಪ್ತಿಯಲ್ಲಿ ಕಂಡುಬಂದಲ್ಲಿ, ಸದರಿ ವಲಯದ ನೋಡಲ್ ಅಧಿಕಾರಿಯನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ಪ್ಲಾಸ್ಟಿಕ್ ಕೈಚೀಲಗಳ ಕನಿಷ್ಟ ಮೊತ್ತವನ್ನು ಪ್ರಮಾಣ ಮತ್ತು ಅಳತೆಯ ಅನುಗುಣವಾಗಿ ನಿಗಧಿಪಡಿಸುವ ಸಲುವಾಗಿ ಸಮತಿಯನ್ನು ರಚಿಸಲಾಗಿದ್ದು, ಸಮಿತಿ ಅನ್ವಯ ಪ್ಲಾಸ್ಟಿಕ್ ಕೈಚೀಲಗಳಿಗೆ ಈ ಕೆಳಕಂಡ ಮೊತ್ತವನ್ನು ನಿಗಧಿಪಡಿಸಲಾಗಿದೆ.

| ಕ್ರಮ ಸಂಖ್ಯೆ | ಪ್ಲಾಸ್ಟಿಕ್ ಕೈಚೀಲದ ಅಳತೆಯ ವಿವರಗಳು | ಪ್ಲಾಸ್ಟಿಕ್ ಉತ್ಪಾದಕರ ವೆಚ್ಚ ರೂಗಳಲ್ಲಿ | ಪ್ಲಾಸ್ಟಿಕ್ ಉದ್ದಿಮೆದಾರರ ವೆಚ್ಚ ರೂಗಳಲ್ಲಿ | ಪ್ಲಾಸ್ಟಿಕ್ ಉತ್ಪಾದಕರ ಮತ್ತು ಪ್ಲಾಸ್ಟಿಕ್ ಉದ್ದಿಮೆದಾರರ ಒಟ್ಟು ವೆಚ್ಚ ರೂಗಳಲ್ಲಿ | ಪಾಲಿಕೆಯು ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಿಸಲು ತಗಲುವ ವೆಚ್ಚ ರೂಗಳಲ್ಲಿ | ಪ್ರತಿ ಪ್ಲಾಸ್ಟಿಕ್ ಕೈಚೀಲದ ಮೊತ್ತ |
|---|---|---|---|---|---|---|
| 1 | 9" x 12 " (1/2 Kg) | 120.0 | 12.0 | 132.0 | 2.25 | 70 ಪೈಸೆ |
| 2 | 9" x 15 " (1 Kg) | 100.0 | 10.0 | 110.0 | 2.25 | 70 ಪೈಸೆ |
| 3 | 10" x 14 " (1 Kg) | 85.7 | 8.6 | 94.3 | 2.25 | 70 ಪೈಸೆ |
| 4 | 13" x 16 " (2 Kg) | 100.0 | 10.0 | 110.0 | 2.25 | 1 ರೂಪಾಯಿ |
| 5 | 16" x 20 " (5 Kg) | 100.0 | 10.0 | 110.0 | 2.25 | 1 ರೂಪಾಯಿ 60 ಪೈಸೆ |
| 6 | 17" x 25" (6 Kg) | 116.7 | 11.7 | 128.3 | 2.25 | 2 ರೂಪಾಯಿ 40 ಪೈಸೆ |
| 7 | 20" x 26" (7 Kg) | 84.0 | 8.4 | 92.4 | 2.25 | 2 ರೂಪಾಯಿ 40 ಪೈಸೆ |
| 8 | 24" x 30" (8 Kg) | 82.4 | 8.2 | 90.6 | 2.25 | 3 ರೂಪಾಯಿ 20 ಪೈಸೆ |

ಈ ಹಿನ್ನೆಲೆಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮ 2011 ರಂತೆ Extended Producers Responsibility (EPR) ಅನ್ವಯ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಣಾ ಕೇಂದ್ರ ಸ್ಥಾಪಿಸಲು ಉತ್ಪಾದಕರಿಂದ ಆರ್ಥಿಕ ಸಹಾಯ ಪಡೆಯಬೇಕಾಗಿರುತ್ತದೆ. ಪಾಲಿಕೆಯು ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಗಾಗಿ ವೆಚ್ಚಮಾಡಬೇಕಾಗಿರುವ ಮೊತ್ತವನ್ನು ಪ್ಲಾಸ್ಟಿಕ್ ಉದ್ದಿಮೆದಾರರಿಂದ ವಾರ್ಷಿಕ ತಯಾರಿಸಲ್ಪಟ್ಟ ಪ್ಲಾಸ್ಟಿಕ್ ಆಧಾರದ ಮೇರೆಗೆ ಉದ್ದಿಮೆ ಪರವಾನಗಿ ನೀಡುವ ಅಧಿಕಾರಿಗಳು ವಸೂಲಾತಿ ಮಾಡಿ ಪ್ರತ್ಯೇಕ ಖಾತೆಯಲ್ಲಿ ಜಮಾ ಮಾಡಲು ಸೂಚಿಸಲಾಗಿದೆ.

7-6-2011

ಆಯುಕ್ತರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ಪೂಜ್ಯ ಮಹಾಪೌರರ ಅವಗಾಹನಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
2. ಉಪ ಮಹಾಪೌರರ ಅವಗಾಹನಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
3. ವಿಶೇಷ ಆಯುಕ್ತರು (ಯೋಜನೆ ಮತ್ತು ಹಣಕಾಸು) ರವರಿಗೆ ಕಳುಹಿಸಿದೆ
4. ಅಪರ ಆಯುಕ್ತರು (ಆಡಳಿತ) ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
5. ಉಪ ಆಯುಕ್ತರು (ಆಡಳಿತ) ರವರಿಗೆ ಕಳುಹಿಸಿದೆ.
6. ಎಲ್ಲಾ ವಲಯ ಅಪರ/ಜಂಟಿ ಆಯುಕ್ತರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
7. ಉಪ ಆಯುಕ್ತರು (ಆರೋಗ್ಯ) ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ
8. ಮುಖ್ಯ ಆರೋಗ್ಯಾಧಿಕಾರಿ ರವರಿಗೆ ಕಳುಹಿಸುತ್ತಾ ವಲಯದ ಎಲ್ಲಾ ಆರೋಗ್ಯ ವೈದ್ಯಾಧಿಕಾರಿಗಳಿಗೆ/ಆರೋಗ್ಯ ಪರಿವೀಕ್ಷಕರುಗಳಿಗೆ ಸೂಕ್ತ ಕ್ರಮಕೈಗೊಳ್ಳಲು ತಿಳಿಸಲು ಸೂಚಿಸಿದೆ.
9. ಮುಖ್ಯ ಅಭಿಯಂತರರು (ಪರಿಸರ ಕೋಶ) ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.